# ಸುನಾಮಿ ಹೇಗಾಯ್ತು?



ಈಶ್ವರ ಬಡಿಗೇರ

ಸುನಾಮಿ ಆಗುವುದೆಂದು ನಾನು ಹೇಳಿದ್ದೆ ಎಂದಿತೊಂದು ಭವಿಷ್ಯಬಾಯಿ, ಅಪಾರ ಸಾವು ನೋವುಗಳು ಆಗುವುದೆಂದು ಹೇಳಿದ್ದೆ ಎಂದಿತೊಂದು ಭವಿಷ್ಯಬೊಂಬಾಯಿ. ಅಷ್ಟ ದಿಗ್ಗಜಗಳ ಪೈಕಿ ಒಂದು ಗಜವು ಒಮ್ಮೆ ತನ್ನ ಭುಜವನ್ನು ಕೊಂಚ ಅಲುಗಿಸಿದಾಗ ಭೂಕಂಪವಾಗುತ್ತದೆ, ಸುನಾಮಿ ಆಗುತ್ತದೆ ಎಂದೆಲ್ಲಾ ಈ ಬಾಯಿಗಳು ಉಲಿಯುತ್ತವೆ. ಅವುಗಳ ಮಾತನ್ನೇ ನಂಬಿದರೂ ಆ ದಿಗ್ಗಜಗಳು ಯಾವುದರ ಮೇಲೆ ನಿಂತಿರುತ್ತವೆ ಎಂದು ಕೇಳಿದರೆ ಈ ಬಾಯಿಗಳು ಕಕ್ಕಾಬಿಕ್ಕಿ ಆಗುತ್ತವೆ.

ಅಸಲಿಗೆ ಸುನಾಮಿ ಆಗುವುದಾದರೂ ಹೇಗೆ ಎಂಬುದನ್ನು ನೋಡೋಣ.

ಭೂಮಿಯ ಹೊರಪದರಗಳು ಟೆಕ್ಟಾನಿಕ್ ಪ್ಲೇಟ್‌ಗಳೆಂಬ ಬಹಳ ಗಟ್ಟಿಯಾದ ಹದಿನಾಲ್ಕು ಪ್ಲೇಟ್‌ಗಳಿಂದ ಮಾಡಲ್ಪಟ್ಟಿದೆ. ಸಮುದ್ರಗಳನ್ನು ಒಳಗೊಂಡಂತೆ ಇಡೀ ಭೂಮಂಡಲಕ್ಕೆ ಇದೇ ರಕ್ಷಾಕವಚ. ಆಫ್ರಿಕನ್ ಪ್ಲೇಟ್, ಅಂಟಾರ್ಟಿಕ್ ಪ್ಲೇಟ್, ಯುರೇಷಿಯನ್ ಪ್ಲೇಟ್, ಇಂಡೋ-ಆಸ್ಟ್ರೇಲಿಯನ್ ಪ್ಲೇಟ್, ನಾರ್ತ್ ಅಮೆರಿಕನ್ ಪ್ಲೇಟ್, ಪೆಸಿಫಿಕ್ ಪ್ಲೇಟ್ ಮತ್ತು ಸೌತ್ ಅಮೆರಿಕನ್ ಪ್ಲೇಟ್ ಎಂಬ ಪ್ರಮುಖ ಖಂಡಗಳನ್ನು ಹೊತ್ತ ಪ್ಲೇಟ್‌ಗಳಲ್ಲದೆ ಅರೇಬಿಯನ್, ಕೆರಿಬಿಯನ್, ಕೋಕೋಸ್, ಜುವಾನ್ ಡಿ ಫುಕಾ, ನಾಝ್ಕಾ, ಫಿಲಿಪೈನ್ ಸಮುದ್ರ ಮತ್ತು ಸ್ಕಾಟಿಯಾ ಪ್ಲೇಟ್‌ಗಳು ಇತರ ಸಣ್ಣ ಪ್ಲೇಟ್‌ಗಳೊಂದಿಗೆ ಭೂಮಿಯ ಹೊರ ಮೈಯನ್ನು ಆವರಿಸಿವೆ. ಸಮುದ್ರದ ತಳದಲ್ಲಿ ಈ ಪ್ಲೇಟ್‌ಗಳು ಆರು ಕಿಲೋ ಮೀಟರ್ ದಪ್ಪ ಇರುತ್ತವೆ ಮತ್ತು ಖಂಡಗಳ ಕೆಳಗಿನವು 30ರಿಂದ 40 ಕಿಲೋಮೀಟರ್ ದಪ್ಪ ಇರುತ್ತವೆ. ಭೂಮಿಯು ತನ್ನ ಅಕ್ಷದ ಸುತ್ತ ಮತ್ತು ಸೂರ್ಯನ ಸುತ್ತ ಸುತ್ತುವಾಗ ಈ ಟೆಕ್ಟಾನಿಕ್ ಪ್ಲೇಟ್‌ಗಳು ಸಹ ಚಲನೆಯಲ್ಲಿರುತ್ತವೆ ಮತ್ತು ಒಂದು ಟೆಕ್ಟಾನಿಕ್ ಪ್ಲೇಟ್‌ನ ತುದಿ ಮತ್ತೊಂದು ಟೆಕ್ಟಾನಿಕ್ ಪ್ಲೇಟ್‌ನ ತುದಿಗೆ ಯಾವಾಗಲೂ ಘಟ್ಟಿಸುತ್ತಲೇ ಸಾಗುತ್ತದೆ. ಯಾವುದಾದರೂ ಸಮಯದಲ್ಲಿ, ಯಾವುದಾದರೂ ಅಂಚಿನಲ್ಲಿ ಆ ಪ್ಲೇಟ್ ದುರ್ಬಲಗೊಂಡರೆ ಪಕ್ಕದ ಪ್ಲೇಟ್ ಆ ದುರ್ಬಲ ಜಾಗದಲ್ಲಿ ಒಳನುಗ್ಗುತ್ತದೆ ಮತ್ತು ಈ ರಭಸಕ್ಕೆ ಭೂಮಿಯ ಪದರಗಳಲ್ಲಿ ಕಂಪನ ಉಂಟಾಗುತ್ತದೆ. ಹಾಗೆ ನೋಡಿದರೆ ಚಲನೆಯಲ್ಲಿರುವ ಭೂಮಿಯಲ್ಲಿ ಸಣ್ಣಸಣ್ಣ ಅದುರುವಿಕೆಗಳು ಅನಂತ, ಆದರೆ ಅವುಗಳು ನಮ್ಮ ಗಮನಕ್ಕೂ ಬರದಷ್ಟು ದುರ್ಬಲ. ಆದರೆ ಟೆಕ್ಟಾನಿಕ್ ಪ್ಲೇಟ್ ದುರ್ಬಲ ಅಂಚನ್ನು ನಾಶಪಡಿಸಿ ಆ ಜಾಗಕ್ಕೆ ರಭಸದಿಂದ ಗುದ್ದಿದಾಗ ಆಗುವ ಭೂಕಂಪ ಗಮನಾರ್ಹವಾದುದ್ದಾಗುತ್ತದೆ. ಖಂಡಗಳ ಟೆಕ್ಟಾನಿಕ್ ಪ್ಲೇಟ್‌ನಲ್ಲಿ ಹೀಗೆ ದುರ್ಬಲತೆ ಉಂಟಾದರೆ ಭೂಕಂಪವಷ್ಟೇ ಜರುಗುತ್ತದೆ, ಆದರೆ ಸಮುದ್ರಗಳ ಕೆಳಗಿನ ಟೆಕ್ಟಾನಿಕ್ ಪ್ಲೇಟ್‌ಗಳಲ್ಲಿ ಈ ವಿಧದ ದುರ್ಬಲತೆ ಉಂಟಾದಾಗ ಕಂಪನದ ಅಲೆಗಳಿಗೆ ನೀರಿನ ಅಲೆಗಳು ಸ್ಪಂದಿಸಿ ಸುನಾಮಿ ಜನ್ಮತಾಳುತ್ತದೆ.

ಭೂಮಿಯ ಮೇಲೆ ಪಾಪಿಗಳ ಸಂಖ್ಯೆ ಹೆಚ್ಚಿದರೆ ಭೂಕಂಪವಾಗುತ್ತದೆ ಎಂದಾದರೆ ವಿಧಾನಸೌಧ, ಪಾರ್ಲಿಮೆಂಟುಗಳ ಕೆಳಗಿನ ಭೂಮಿ ದಿನವೂ ಅದುರುವಾಯು ಹಿಡಿದವರಂತೆ ಅಲ್ಲಾಡುತ್ತಿರಬೇಕಾಗುತ್ತದೆ! ಹಾಗಾಗದ್ದರಿಂದ ಪಾಪದ ಭಾರಕ್ಕೂ, ಭೂಕಂಪಕ್ಕೂ ಸಂಬಂಧವಿಲ್ಲವೆಂದಾಯಿತು. ಸುನಾಮಿಗೆ ಯಾವ ಕ್ಷುದ್ರ ದೇವತೆಯೂ, ಗ್ರಹವೂ ಕಾರಣವಲ್ಲ, ಅಷ್ಟ ದಿಗ್ಗಜಗಳ ಅಲ್ಲಾಡುವಿಕೆಯೂ ಅಲ್ಲ. ಆದ್ದರಿಂದ ಯಾವ ಭವಿಷ್ಯಕಾರನೂ ಸುನಾಮಿ ಇಂತಹ ಜಾಗದಲ್ಲಿ, ಇಂತಿಷ್ಟು ವೇಳೆಗೆ ಆಗುವುದೆಂದು ಹೇಳಲು ಸಾಧ್ಯವಿಲ್ಲ. ಆದರೆ ಕಾಡುಪ್ರಾಣಿಗಳು, ಮೀನುಗಳು ಭೂಮಿಯ ಚಲನೆಯನ್ನು ಮಾನವನಿಗಿಂತಲೂ ಚೆನ್ನಾಗಿ ಅರಿತಂತಹವು. ಅಂತೆಯೇ ಕೆಲವು ಬುಡಕಟ್ಟು ಜನಾಂಗಗಳೂ ಸಹ. ಅಂಡಮಾನ್‌ನಲ್ಲಿ ಆದ ಸುನಾಮಿ ದುರಂತದಲ್ಲಿ ಅಲ್ಲಿನ ಒಬ್ಬ ಬುಡಕಟ್ಟು ಮನುಷ್ಯನೂ ಸಾಯಲಿಲ್ಲ; ಹುಲಿ, ಚಿರತೆ, ಜಿಂಕೆಗಳೆಲ್ಲವೂ ಬೆಟ್ಟದ ಮೇಲಕ್ಕೆ ಓಡತೊಡಗಿದವು, ಸಮುದ್ರಕ್ಕೆ ಕೋಪ ಬಂದಿದೆ ಎಂದು ನಮಗೆ ತಿಳಿಯಿತು. ನಾವೂ ಎತ್ತರದ ಜಾಗಗಳಿಗೆ ಹೋಗಿ ಸೇರಿದೆವು. ನೀರಿನ ಅಲೆಗಳನ್ನು ಮೀರಿದ ಜಾಗಕ್ಕೆ ತಲುಪಿದ್ದರಿಂದ ನಮಗೆ ಯಾವ ಹಾನಿಯೂ ಆಗಲಿಲ್ಲ ಎಂದರು ಆ ಬುಡಕಟ್ಟು ಮಂದಿ. ಆ ಜನಾಂಗದವರು ಪೇಪರ್ ಓದುವುದಿಲ್ಲ, ಟಿವಿ ನೋಡುವುದಿಲ್ಲ, ಪಂಚಾಂಗ ತಿಳಿದಿಲ್ಲ, ಗ್ರಹ- ನಕ್ಷತ್ರ- ರಾಶಿಗಳ ಗೊಡವೆ ಅವರಿಗಿಲ್ಲ. ಪ್ರಕೃತಿಯನ್ನು ಓದಿದ್ದಾರೆ, ತಿಳಿದಿದ್ದಾರೆ, ಬದುಕಿದ್ದಾರೆ.

ನಮ್ಮ ನಾಗರಿಕ ಜಗತ್ತಿನಲ್ಲಿ ನಾವು ಗ್ರಹ, ನಕ್ಷತ್ರಗಳನ್ನು ಪಂಚಾಂಗದಲ್ಲೂ ಕಂಡಿದ್ದೇವೆ, ವಿಜ್ಞಾನದಲ್ಲೂ ಕಂಡಿದ್ದೇವೆ. ವೈಜ್ಞಾನಿಕವಾಗಿ ಸೂರ್ಯ ನಕ್ಷತ್ರ ಎಂದು ಸಾಬೀತಾದರೂ, ಶಾಸ್ತ್ರ ಕೇಳಲು ಹೋದಾಗ ರವಿ ಮೂರನೆಯ ಮನೆಯಲ್ಲಿದ್ದಾನೆ. ಆ ಗ್ರಹ ನಾಲ್ಕನೆಯ ಮನೆಗೆ ಬರಬೇಕು ಎಂದಾಗ ಕೋಲೆಬಸವನಂತೆ ರವಿಯನ್ನು ಗ್ರಹ ಎಂದು ಒಪ್ಪುತ್ತೇವೆ. ಉಪಗ್ರಹವಾದ ಚಂದ್ರನನ್ನು ಗ್ರಹ ಎಂದು ಒಪ್ಪುತ್ತೇವೆ. ದೇಹವೇ ಇಲ್ಲದ ರಾಹು ಮತ್ತು ತಲೆಯೇ ಇಲ್ಲದ ಕೇತುವನ್ನೂ ಸಹ ನಾವು ಶಕ್ತ ಕ್ರೂರಗ್ರಹಗಳು ಎಂದು ನಂಬುತ್ತೇವೆ.

ಯಾವುದೇ ವ್ಯಕ್ತಿಯ ಜಾತಕವನ್ನು ಚೆನ್ನಾಗಿ ಪರಿಶೀಲಿಸಿ, ದೊರೆತಿರುವ ಟೈಪ್ ಕ್ಯಾಸ್ಟಿಂಗ್ ಆಧಾರದ ಮೇರೆಗೆ ವ್ಯಕ್ತಿಯ ಆಗುಹೋಗುಗಳನ್ನು ಸ್ವಲ್ಪಮಟ್ಟಿಗೆ ಹೇಳಬಹುದು. ಆದರೆ ಏನೇನೂ ಇಲ್ಲದೆ ನುಡಿಯುವ ನಿತ್ಯಭವಿಷ್ಯ, ವಾರಭವಿಷ್ಯ,ಮಾಸಭವಿಷ್ಯಗಳು,ಕೆಲವೊಮ್ಮೆ ಕಾಕತಾಳೀಯವಾಗಿ ನಿಜವಾಗುವುದರ ಹೊರತಾಗಿ, ನೂರಕ್ಕೆ ನೂರು ಸುಳ್ಳು.

■ ವೈ-ಚಾರಿ